ಪರಿಶೀಲನೆಯಲ್ಲಿದೆ. ಸ್ವಯಂ ನಿವೃತ್ತಿ ಯೋಜನೆಯನ್ವಯ ಸ್ವಯಂ ನಿವೃತ್ತಿ ಪಡೆದ ಉಳಿದ ಉದ್ಯೋಗಿಗಳಿಗೆ ಈಗಾಗಲೇ ವಿಮುಕ್ತಿ ಸೌಲಭ್ಯಗಳ ಪರಿಹಾರವನ್ನು ಪೂರ್ಣವಾಗಿ ಪಾವತಿಸಿದೆ. ಉಳಿದಂತೆ ಸೂಪರ್ ಅನ್ಯುಯೇಷನ್ ವಂತಿಗೆ, ತುಟ್ಟಿಭತ್ಯೆ ಮತ್ತು ವೇತನ ಬಡ್ತಿಯ ಬಾಕಿಯನ್ನು ರಾಜ್ಯ ಉಚ್ಚನ್ಯಾಯಾಲಯದ ಒಪ್ಪಿಗೆಯೊಂದಿಗೆ ಸಂಸ್ಥೆಯ ಆಸ್ತಿ ವಿಲೇವಾರಿಯಿಂದ ಬಂದ ಹಣದಲ್ಲಿ ಪಾವತಿಸಬೇಕಾಗುವುದು.

ಚಿಕ್ಕಮಗಳೂರು ಜಿಲ್ಲೆಯಲ್ಲಿನ ಅಂಗನವಾಡಿ ಕೇಂದ್ರಗಳು

3665 (4172) : ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಇವೆ? ತಾಲ್ಲೂಕುವಾರು ವಿವರ ನೀಡುವುದು?

ಆ) ಕಳೆದ 3 ವರ್ಷಗಳಿಂದ ಪ್ರತಿ ತಾಲ್ಲೂಕಿಗೆ ಮಕ್ಕಳ ಪೌಷ್ಟಿಕ ಆಹಾರಕ್ಕೆ ಹಾಗೂ ಇತರೇ ವೆಚ್ಚಕ್ಕಾಗಿ ಖರ್ಚುಮಾಡಿದ ಹಣವೆಷ್ಟು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) 1226 ಅಂಗನವಾಡಿ ಕೇಂದ್ರಗಳು

ತಾಲ್ಲೂಕಿನ ಹೆಸರು	ಅಂಗನವಾಡಿ ಕೇಂದ್ರಗಳ ಸಂಖ್ಯೆ
ಚಿಕ್ಕಮಗಳೂರು	298
ಕಡೂರು	259
ಕೊಪ್ಪ	100
ಮೂಡಿಗೆರೆ	161
ಎನ್.ಆರ್.ಪುರ	68
ಶೃಂಗೇರಿ	100
ತರೀಕೆರೆ	240
ಒಟ್ಟು	**1226**

ಆ) ಖರ್ಚು ಮಾಡಿದ ಹಣದ ವಿವರ ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕಳೆದ ಮೂರು ವರ್ಷಗಳಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಹಾರಕ್ಕಾಗಿ ಮತ್ತು ಇತರೆ ವೆಚ್ಚಕ್ಕಾಗಿ ಮಾಡಿದ ಹಣದ ತಾಲ್ಲೂಕುವಾರು ವಿವರ

ತಾಲ್ಲೂಕು	2000–01		2001–02		2002–03	
	ಆಹಾರ	ಇತರೆ	ಆಹಾರ	ಇತರೆ	ಆಹಾರ	ಇತರ
1. ಕಡೂರು	75–40	50–92	59–46	15–25	60–85	70–51
2. ಕೊಪ್ಪ	16.08	19–75	15–68	19–73	15–91	26–63
3. ಮೂಡಿಗೆರೆ	22–85	25–80	18–46	13–07	18–84	38–36
4. ಶೃಂಗೇರಿ	10–27	18–84	12–57	20–11	11–06	28–38
5. ಚಿಕ್ಕಮಗಳೂರು	63–34	65–84	62–43	67–19	48–00	88–01

1	2	3	4	5	6	7	8
6.	ತರೀಕೆರೆ	52–35	53–33	41–10	54–72	38–10	73–44
7.	ನರಸಿಂಹರಾಜಪುರ	16–21	14–19	15–96	14–84	10–23	18–85
8.	ಜಿಲ್ಲಾಕಛೇರಿ		9–31		11–01		10–91
	ಒಟ್ಟು	258–50	257–98	225–66	215–92	202–99	355–09

ರಾಜ್ಯದಲ್ಲಿ ಅಂಗವಿಕಲರಿಗೆ ಸಹಾಯ ಧನ

3666 (4173) : ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಅಂಗವಿಕಲರಿಗಾಗಿ ವಿವಿಧ ರೂಪದಲ್ಲಿ ಸರ್ಕಾರ ನೀಡಿದ ಸಹಾಯಧನವೆಷ್ಟು? ವಿವರ ನೀಡುವುದು

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ಅಂಗವಿಕಲರಿಗಾಗಿ ಸರ್ಕಾರ ವಿವಿಧ ರೂಪದಲ್ಲಿ ನೀಡಿದ ಸಹಾಯ ಧನದ ವಿವರವನ್ನು ನೀಡುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು)

ಅ) ವಿವರಗಳನ್ನು ಅನುಬಂಧ– 1 ರಲ್ಲಿ ನೀಡಲಾಗಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಂಗವಿಕಲರಿಗೆ ಸರ್ಕಾರ ವಿವಿಧ ರೂಪದಲ್ಲಿ ನೀಡಿದ ಸಹಾಯಧನದ ತಾಲ್ಲೂಕುವಾರು ವಿವರವನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

ಅನುಬಂಧ –1

ಕಳೆದ ಮೂರು ವರ್ಷಗಳಲ್ಲಿ ಅಂಗವಿಕಲರಿಗಾಗಿ ವಿವಿಧ ರೂಪದಲ್ಲಿ ಮಾಡಲಾದ ಖರ್ಚಿನ ವಿವರ

(ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ವಿವರ	2000–01	2001–02	2002–03
1.	ಶಿಕ್ಷಣ ಮತ್ತು ವಿದ್ಯಾರ್ಥಿ ವೇತನ	387.40	445.45	480.25
2.	ಉದ್ಯೋಗ ಮತ್ತು ತರಬೇತಿ	98.00	108.27	84.63
3.	ಪುನರ್ವಸತಿ ಯೋಜನೆಗಳು	104.56	73.46	48.89
4.	ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ	3513.66	3764.60	3692.68
5.	ಸಾರ್ವಜನಿಕರಿಗೆ ಅರಿವು ಮೂಡಿಸುವುದು	22.50	18.61	27.93
6.	ಆಡಳಿತ ಮತ್ತು ಸಇಬ್ಬಂದಿ	97.58	69.84	87.22
	ಒಟ್ಟು	**4223.70**	**4480.23**	**4421.60**